
# ಬೆಳಕಿನ ಸಂಚಲನ

ಸಂ 1, ಸಂ 7 ನವೆಂಬರ್ 2013



## ಗುರೂಜಿ ಕೃಷ್ಣಾನಂದ (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಏಳುವಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ.
- ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ಕೊಡುಗೆಯನ್ನು ಕೊಡಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

**ಅನು: ಶ್ರೀದೇವಿ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು)

ಈ ಭೂಗ್ರಹದ ಒಂದು ಹೊಸ ಘಟ್ಟಕ್ಕೆ ನಾವು ಕಾಲಿಟ್ಟಿದ್ದೇವೆ. ಪ್ರಜ್ಞೆಯಲ್ಲಿ ಸ್ಥಿತ್ಯಂತರವಾಗಿರುವುದನ್ನು ನಾನು ನೋಡುತ್ತಿದ್ದೇನೆ. ಅದ್ಭುತವಾದ ಘಟನೆಗಳು ಸಂಭವಿಸುತ್ತಿರುವುದನ್ನು ನೋಡಿ. ಈ ವಾರ್ತಾಪತ್ರಿಕೆಯಲ್ಲಿನ ಮಕ್ಕಳ ಅನುಭವಗಳನ್ನು ನೋಡಿ! ಒಂದು ಮಗು ತನ್ನ ಜೊತೆ ಮಾತನಾಡದೆ ಇದ್ದ ತನ್ನ ಗೆಳತಿಗೆ ಬೆಳಕನ್ನು ಕಳುಹಿಸಿತು. ಹಾಗೂ ಆ ಗೆಳತಿ ಅದಕ್ಕೆ ಪ್ರತಿಕ್ರಿಯಿಸಿದಳು. ಇನ್ನೊಂದು ಮಗು ತನ್ನ ಪೋಷಕರಿಗೆ ಬೆಳಕನ್ನು ಕಳುಹಿಸಿತು ಹಾಗೂ ಅವರಿಂದ ನಿರೀಕ್ಷಿಸುತ್ತಿದ್ದ ಕರೆ ಬಂತು! ಹೊಟ್ಟೆನೋವಿನಿಂದ ನರಳುತ್ತಿದ್ದ ಒಂದು ಮಗುವಿಗೆ ಬೆಳಕನ್ನು ಕಳುಹಿಸಲು ತಮ್ಮ ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರು ಹೇಳಿದರು. ಆ ಮಗು ಗುಣಹೊಂದಿತು! ಬೆಳಕಿನ ಬಗ್ಗೆ ಅವರಿಗಿರುವ ದೃಢನಂಬಿಕೆಯನ್ನು ನೋಡಿ! ಬೆಳಕಿನಿಂದ ಸಹಾಯ ಪಡೆಯುವುದು ಹೇಗೆಂದು ಅಂತರ್ಬೋಧೆಯಿಂದ ಅವರಿಗೆ ತಿಳಿದಿದೆ. ಹಾಗೂ ಬೆಳಕು ಯಾವಾಗಲೂ ಸಹಾಯ ಮಾಡುತ್ತದೆ.

ಪ್ರಜ್ಞಾ ಪಲ್ಲಟದಿಂದಾಗಿ ಜಾಗೃತಿಯುಂಟಾಗುತ್ತಿರುವುದು ಎಚ್ಚರಿಕೆಯಿಂದ ಗಮನಿಸುವವರಿಗೆ ತಿಳಿಯುತ್ತದೆ. ನಾವು ಬೆಳಕಿನ ಯುಗದಲ್ಲಿದ್ದೇವೆ. ಕೆಲವರು ಇದನ್ನು ಈಗ ಗಮನಿಸುತ್ತಾರೆ ಮತ್ತು ಇತರರು ನಂತರ ಗಮನಿಸುತ್ತಾರೆ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಮಾತನಾಡುವಾಗ ತೊದಲುವ ಒಬ್ಬ ವ್ಯಕ್ತಿ ಲೈಟ್ ಚಾನಲಿಂಗ್ ಸೆಷನ್ ನಡೆಸುವಾಗ ತೊದಲದೆ ಇದ್ದದ್ದನ್ನು ನಮ್ಮ ಅನೇಕ ಕಾರ್ಯಕರ್ತರು ಗಮನಿಸಿದ್ದಾರೆ. ಇದು ಹೇಗೆ ಸಾಧ್ಯವಾಯಿತು? ಉದಾತ್ತವಾದ ಕೆಲಸದಲ್ಲಿ ಪ್ರಾಮಾಣಿಕವಾಗಿ ನಾವು ತೊಡಗಿದಾಗ ವಿಶ್ವದಿಂದ ಕೃಪೆ ನಮಗೆ ಹರಿದು ಬಂದು ಇಂತಹ ಪವಾಡಸದೃಶ ಫಲಿತಾಂಶ ತರುತ್ತದೆ.

ಬೆಳಕನ್ನು ಆಯ್ಕೆ ಮಾಡುವುದರ ಬಗ್ಗೆ ಗುರೂಜಿಯವರು ಹಲವಾರು ಸಲ ಹೇಳಿದ್ದಾರೆ. ಬೆಳಕನ್ನು ಆಯ್ಕೆ ಮಾಡುವುದೆಂದರೆ ಪ್ರಾಮಾಣಿಕತೆಯ ದಾರಿಯನ್ನು ಆರಿಸಿಕೊಳ್ಳುವುದು, ಒಳ್ಳೆಯತನವನ್ನು ಆರಿಸಿಕೊಳ್ಳುವುದು ಮತ್ತು ಶಾಂತಿಯಿಂದಿರುವುದು. ಈ ರೀತಿಯಾಗಿ ಬೆಳಕಿಗೆ ಶ್ರುತಿಗೊಂಡು ಬದುಕುವುದನ್ನು ಆರಿಸಿಕೊಂಡಾಗ, ದೈವಿಕ ಚೈತನ್ಯಗಳು ನಮ್ಮ ಮೂಲಕ ಪ್ರವಹಿಸುತ್ತಾ ದೈವಾನುಗ್ರಹ ಮತ್ತು ಸ್ಥೈರ್ಯವನ್ನು ತರುತ್ತದೆ. ಈ ಭೂಮಿಯು ಹಾದುಬಂದ ಸಾವಿರಾರು ವರ್ಷಗಳ ಕತ್ತಲ ಯುಗದಲ್ಲಿ ವಿಕೃತಗೊಂಡಿದ್ದ ಆಧ್ಯಾತ್ಮಿಕ ಜ್ಞಾನವನ್ನು ಸರಳಗೊಳಿಸುವುದು ಗುರೂಜಿಯವರ ವಿಶೇಷತೆಯಾಗಿತ್ತು. ಹಾಗೂ ಲೈಟ್ ಚಾನಲಿಂಗ್‌ಅನ್ನು ಪರಿಚಯಿಸುವುದರ ಮೂಲಕ ಈ ಭೂಮಿಯ ಭವಿಷ್ಯವನ್ನು ರೂಪಿಸುವುದರಲ್ಲಿ ಪಾಲ್ಗೊಳ್ಳುವ ಒಂದು ಮಾರ್ಗವನ್ನು ನಮಗೆ ತೋರಿಸಿಕೊಟ್ಟರು.

25 ಲಕ್ಷಕ್ಕೂ ಅಧಿಕ ಮಕ್ಕಳು ಲೈಟ್ ಚಾನಲ್ ಮಾಡುವುದನ್ನು ಕಲಿತಿದ್ದಾರೆ. ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದ ನಮ್ಮ ಕಾರ್ಯಕರ್ತರಿಗೂ ಮತ್ತು ಪ್ರಾಮಾಣಿಕವಾಗಿ ಪ್ರೋತ್ಸಾಹಿಸಿದ ಶಾಲಾ ಅಧಿಕಾರಿಗಳಿಗೂ ಕೃತಜ್ಞತೆಗಳು.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ಮಹಾತ್ಮರಿಗೆ ಎಂದಿಗೂ ಸಾವಿಲ್ಲ. ಅವರು ನಮ್ಮ ಆಲೋಚನೆಗಳಲ್ಲಿ ಮತ್ತು ಭಾವನೆಗಳಲ್ಲಿ ಎಂದೆಂದಿಗೂ ಉಳಿಯುತ್ತಾರೆ. ಅವರು ಉನ್ನತ ಲೋಕಗಳಿಂದ ನಮಗೆ ಯಾವಾಗಲೂ ಮಾರ್ಗದರ್ಶನ ಮಾಡುತ್ತಾರೆ. ನಮ್ಮ ಗುರೂಜಿಯವರೂ ಸಹ ಒಂದು ಮಹಾನ್ ಆತ್ಮವಾಗಿದ್ದರು. ಅವರು ತಮ್ಮ ಭೌತಿಕ ಶರೀರದಲ್ಲಿ ಇಲ್ಲದಿದ್ದರೂ ಸಹ ಅವರ ಮಾರ್ಗದರ್ಶನ ಮುಂದುವರೆಯುತ್ತಿದೆ. ಅವರಿಗೆ ಪ್ರತಿಯೊಬ್ಬ ವ್ಯಕ್ತಿ ಮತ್ತು ಇಡೀ ವಿಶ್ವದ ಬಗ್ಗೆ ಯಾವಾಗಲೂ ಕಾಳಜಿ ಇತ್ತು. ಅವರು ಒಬ್ಬ ಮಾಹಾನ್ ದಾರ್ಶನಿಕರಾಗಿದ್ದರು ಹಾಗೂ ಹಿಂಸೆ ಮತ್ತು ಬ್ರಷ್ಟಾಚಾರ ಮುಕ್ತ ಪ್ರಪಂಚವನ್ನು ನೋಡುವುದು ಅವರ ಕನಸಾಗಿತ್ತು.

ಅವರು ಬದುಕನ್ನು ಬದಲಾಯಿಸುವಂತಹ 'ಲೈಟ್ ಚಾನಲಿಂಗ್' ಎಂಬ ತಂತ್ರವನ್ನು ಪರಿಚಯಿಸಿದರು. ಅವರ ಮಾರ್ಗದರ್ಶನದಲ್ಲಿ, ಶಾಲೆಗಳಲ್ಲಿ ಲೈಟ್ ಚಾನಲಿಂಗ್ ಅಗಾಧವಾದ ಯಶಸ್ಸು ಕಂಡಿದೆ. ಬಹುಷಃ ಈ ತಂತ್ರ ಬಹು ಸರಳ ಮತ್ತು ವಿಶ್ವವ್ಯಾಪಿಯಾಗಿದ್ದು ಪ್ರಪಂಚದ ಕಲ್ಯಾಣಕ್ಕೆ ಬಹಳ ಪರಿಣಾಮಕಾರಿಯಾಗಿದೆ. ಈ ತಂತ್ರದಿಂದ ಲಕ್ಷಗಟ್ಟಲೆ ಮಕ್ಕಳು ಮತ್ತು ವಯಸ್ಕರು ಪ್ರಯೋಜನಗಳನ್ನು ಪಡೆಯುತ್ತಿದ್ದಾರೆ.

ಅಜ್ಞಾನದಿಂದ ಜ್ಞಾನದೆಡೆಗೆ ಹಾಗೂ ಅಂಧಕಾರದಿಂದ ಬೆಳಕಿನೆಡೆಗೆ ದಾರಿ ತೋರಿದ ಈ ಮಹಾತ್ಮರಿಗೆ ಅವರ ಮೊದಲನೇ ಪುಣ್ಯ ತಿಥಿಯಂದು ನಾವು ನಮನಗಳನ್ನು ಸಲ್ಲಿಸುತ್ತೇವೆ. ನಮ್ಮ ಪ್ರತಿಯೊಂದು ಹೆಜ್ಜೆಯಲ್ಲೂ ಅವರ ಮಾರ್ಗದರ್ಶನ ಮತ್ತು ಅಶೀರ್ವಾದವನ್ನು ಕೋರುತ್ತೇವೆ. ನಮ್ಮೊಂದಿಗೆ ಸದಾಕಾಲ ಇರುವುದಕ್ಕಾಗಿ ನಾವು ಅವರಿಗೆ ಧನ್ಯವಾದವನ್ನು ಅರ್ಪಿಸುತ್ತೇವೆ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು–560077 ಭಾರತ.
ಫೋನ್ : (080) 2846 5280, 99000 75280 (10 AM to 4 PM)
ಇ–ಮೇಲ್ : info@lightagemasters.com info@lightchannels.com
ವೆಬ್‌ಸೈಟ್ : www.lightagemasters.com www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಿಲ್ಲ.

### ಬೆಂಗಳೂರು

ಸೋಮವಾರದಿಂದ ಶುಕ್ರವಾರದವರೆಗೆ
(ಸಂಜೆ 7:00 - 7:15)
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

ಸೋಮವಾರ (ಸಂಜೆ 6:30 - 7:00)
ಆಂಜನೇಯ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಬುಧವಾರ (ಸಂಜೆ 6:30 - 7:00)
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಗುರುವಾರ (ಸಂಜೆ 6:30 - 7:00)
ಮಂಚ್‌ಕಿನ್ಸ್, ನಂ. 890, 38ನೇ ಅಡ್ಡರಸ್ತೆ,
20ನೇ ಮುಖ್ಯರಸ್ತೆ, 4ನೇ 'T' ಬ್ಲಾಕ್, ಜಯನಗರ
☎ 9972888033 ಕಾರ್ತಿಕ್ ಎನ್.

ಗುರುವಾರ (ಸಂಜೆ 6:30 - 7:00)
ನಂ. 312, ಹಂತ-4, ಗೋಲ್ಡನ್ ಪಾರ್ಕ್ ಅಪಾರ್ಟ್‌ಮೆಂಟ್, ಕೆ.ಸಿ.ಡಿ.ಸಿ. ಮುಖ್ಯರಸ್ತೆ,
ಬೊಮ್ಮನಹಳ್ಳಿ.
☎ 9886437042 ಡಾ. ರವಿಂದರ್ ಸಿಂಗ್ ಗೌರ್

ಶುಕ್ರವಾರ (ಸಂಜೆ 6:30 - 7:00)
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ, ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ. ಭೋಸೆಕರ್

ಶನಿವಾರ (ಸಂಜೆ 5:30 - 6:00)
ಶ್ರೀ ರಂಗ ಕಲಾಕ್ಷೇತ್ರ, 13ನೇ ಅಡ್ಡರಸ್ತೆ,
2ನೇ ಹಂತ, ಇಂದಿರಾನಗರ
☎ 9902844667 ಶ್ರೀಮತಿ ಮಂಜು ಮಹೇಶ್ವರಿ

ಶನಿವಾರ (ಸಂಜೆ 6:30 - 7:00)
ಬಲಮುರಿ ಮಹಾಗಣಪತಿ, 8ನೇ ಅಡ್ಡರಸ್ತೆ,
ಹೊಯ್ಸಳ ವೃತ್ತದ ಬಳಿ, ಕೆಂಗೇರಿ ಸೆಟಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಶನಿವಾರ (ಸಂಜೆ 6:00 - 7:00)
ಶಿಕ್ಷಾ ಸಾಗರ್ ಪ್ರೈಮರಿ ಶಾಲೆ, ನಂ. 77,
5ನೇ ಮುಖ್ಯ ರಸ್ತೆ, ಪೋಸ್ಟಲ್ ಕಾಲೋನಿ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್

ಶನಿವಾರ (ಸಂಜೆ 7:30 - 8:30)
ಗುರುದ್ವಾರ ಸಾಹಿಬ್, ಆಂಜನೇಯ ದೇವಸ್ಥಾನದ ಎದುರು, ಅಶ್ವತ್ಥ ನಗರ ಮುಖ್ಯ ರಸ್ತೆ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್



ತಮಿಳುನಾಡಿನ ತಿರುನಲ್ವೇಲಿಯ ನಮ್ಮ ಲೈಟ್ ಚಾನಲಿಂಗ್ ಕೇಂದ್ರದಲ್ಲಿ ಚಾನಲಿಂಗ್ ಮಾಡುತ್ತಿರುವುದು

## ಪ್ರಮುಖ ಘಟನೆಗಳು

- ಫೆಬ್ರವರಿ 1, 2010 – 50 ಕ್ಕೂ ಹೆಚ್ಚು ಸ್ವಯಂಸೇವಕರ ತಂಡವೊಂದು ದಕ್ಷಿಣ ಭಾರತದ 50 ಶಾಲೆಗಳನ್ನು ಸಂಪರ್ಕಿಸಿ ಸುಮಾರು 30,000 ಮಕ್ಕಳಿಂದ ಲೈಟ್ ಚಾನಲಿಂಗ್ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನಕ್ಕೆ ಭಾರಿ ಚಾಲನೆ ನೀಡಿದರು.
- ಡಿಸೆಂಬರ್ 18, 2010 – 50 ಕ್ಕೂ ಹೆಚ್ಚು ಸ್ವಯಂಸೇವಕರ ತಂಡವೊಂದು ಮೈಸೂರು, ಬೆಂಗಳೂರು, ಚೆನ್ನೈ, ಮುಂಬೈ ಮತ್ತು ಹೈದರಾಬಾದ್‌ಗಳಲ್ಲಿರುವ 107 ಶಾಲೆಗಳಿಗೆ ಒಂದೇ ದಿನದಲ್ಲಿ ಭೇಟಿ ನೀಡಿ 62,000 ಕ್ಕೂ ಹೆಚ್ಚು ಮಕ್ಕಳಿಗೆ ಲೈಟ್ ಚಾನಲಿಂಗ್ ಮಾಡುವುದನ್ನು ಕಲಿಸಿಕೊಟ್ಟರು.
- ಫೆಬ್ರವರಿ 1, 2011, ವಿಶ್ವ ಚಾನಲ್‌ಗಳ ದಿನ – 130 ಸ್ವಯಂಸೇವಕರು ಭಾರತದಾದ್ಯಂತ ಸುಮಾರು 600 ಶಾಲೆಗಳಲ್ಲಿನ 4 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಲೈಟ್ ಚಾನಲಿಂಗ್ ಅಭ್ಯಾಸ ಮಾಡಿಸಿದರು.
- ಜನವರಿ 18, 2012 – ಬೆಂಗಳೂರು, ಪುಣೆ, ಚೆನ್ನೈ ಮತ್ತು ಮಂಗಳೂರಿನ 11, 570 ಮಕ್ಕಳು 16 ವಿವಿಧ ಸೆಷನ್‌ಗಳಲ್ಲಿ ಲೈಟ್ ಚಾನಲ್ ಮಾಡಿದರು.
- ಫೆಬ್ರವರಿ 1, 2012, ವಿಶ್ವ ಚಾನಲ್‌ಗಳ ದಿನ – ನೂರಾರು ಶಾಲೆಗಳ 6 ಲಕ್ಷಕ್ಕೂ ಹೆಚ್ಚು ಮಕ್ಕಳು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಮೇ 7, 2012 – ಬೆಂಗಳೂರಿನ ಚೌಡಯ್ಯ ಸ್ಮಾರಕ ಭವನದಲ್ಲಿ ಆಯೋಜಿಸಿದ್ದ ಲೈಟ್ ಚಾನಲ್‌ಗಳ ಸಮಾವೇಶದಲ್ಲಿ ಸುಮಾರು ಒಂದು ಸಾವಿರ ಜನರು ಸೇರಿದ್ದರು. ಪ್ರಪಂಚದಾದ್ಯಂತ ಸಾವಿರಾರು ಜನರು ವೆಬ್‌ಕಾಸ್ಟ್ ಮತ್ತು ಮನೋಸಂಪರ್ಕಗಳ ಮೂಲಕ ತಮ್ಮ ತಮ್ಮ ಸ್ಥಳದಿಂದಲೇ ಭಾಗವಹಿಸಿ 15 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡಿದರು.
- ಫೆಬ್ರವರಿ 1, 2013, ಮೂರನೇ ವಿಶ್ವ ಚಾನಲ್‌ಗಳ ದಿನ – ಭಾರತದಾದ್ಯಂತ 1868 ಶಾಲೆಗಳ ಸುಮಾರು 8.86 ಲಕ್ಷ ಮಕ್ಕಳು ಮತ್ತು ಅಧ್ಯಾಪಕರು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಜೂನ್ 29, 2013 - ಬೆಂಗಳೂರು, ಮೈಸೂರು, ಹೈದ್ರಾಬಾದ್, ಸಾಂಗ್ಲಿಯಲ್ಲಿನ 30 ಶಾಲೆಗಳಲ್ಲಿ ಮತ್ತು ಭಾರತದಾದ್ಯಂತ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ 13,449 ಮಕ್ಕಳು ಲೈಟ್ ಚಾನಲಿಂಗ್ ಮಾಡಿದರು.

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | |
|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | 4336 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | 25 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | 1140 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 5.18 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ಬೆಳಕೇ ನಮ್ಮ ಶಕ್ತಿ

**ಕಾರ್ತಿಕ್ ಎನ್.**

**ಅನು: ವಿಕಾಸ್ ಕಾರಂತ್**

ಒಳ್ಳೆಯದೆಂದು ತಿಳಿದ ಎಲ್ಲವನ್ನೂ ನಮ್ಮ ಜೀವನದಲ್ಲಿ ಅಡವಳಿಸಿಕೊಳ್ಳುವುದರ ಬಗ್ಗೆ ನಾನು ಒಬ್ಬ ವ್ಯಕ್ತಿಯೊಡನೆ ಚರ್ಚಿಸುತ್ತಿದ್ದಾಗ, ಅವರು ಬಹಳ ಕುತೂಹಲದಿಂದ "ಅದು ಹೇಗೆ ಸಾಧ್ಯ?" ಎಂದು ಪ್ರಶ್ನಿಸಿದರು. ಪ್ರತಿ ಕ್ಷಣದಲ್ಲೂ ಒಳ್ಳೆಯದನ್ನು ಅಥವಾ ಕೆಟ್ಟದ್ದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ನಮಗಿದೆ, ಎಂದು ಉತ್ತರಿಸಿದೆ. ನಾವೇನು ಮಾಡುತ್ತಿದ್ದೇವೆ ಎಂಬುದರ ಬಗ್ಗೆ ನಮಗೆ ಯಾವಾಗಲೂ ಅರಿವಿರುತ್ತದೆ. ಒಳ್ಳೆಯದನ್ನು ಆಯ್ಕೆ ಮಾಡುವುದು ಕಷ್ಟವೆನಿಸಿದರೂ ಅದನ್ನೇ ಆರಿಸಿಕೊಳ್ಳಬೇಕು ಮತ್ತು ಅದರಂತೆಯೇ ಮಾಡಬೇಕು, ಎಂದು ಹೇಳಿದೆ.

ಅದಕ್ಕೆ ಅವರು "ನನಗೆ ಯಾರಾದರೂ ಕೆಟ್ಟದ್ದನ್ನು ಮಾಡಿದರೆ, ನಾನು ಖಂಡಿತವಾಗಿಯೂ ಪ್ರತೀಕಾರ ಮಾಡುತ್ತೇನೆ" ಎಂದು ಹೇಳುತ್ತಾ ಲಘುವಾಗಿ ವಿರೋಧಿಸಿದರು. ಮುಂದುವರೆಯುತ್ತಾ, "ಯಾರಾದರೂ ನನಗೆ ಹಣವನ್ನು ವಂಚಿಸಿದರೆ, ನಾನು ಯಾವುದೇ ರೀತಿಯಿಂದಲಾದರೂ ಸರಿ ಆ ಹಣವನ್ನು ಪಡೆದುಕೊಂಡಾಗಲೇ ನನಗೆ ಸಂತೋಷವಾಗುತ್ತದೆ ಹಾಗೂ ನನಗೆ ನಾನು ಸರಿಯಾದದ್ದನ್ನೇ ಮಾಡಿದ್ದೇನೆ ಎಂಬ ತೃಪ್ತಿ ಉಂಟಾಗುತ್ತದೆ" ಎಂದು ಹೇಳಿದರು. ಬಹುಷಃ ಅವರಿಗೆ ಈ ರೀತಿ ನಡೆದುಕೊಳ್ಳುವುದೇ ಸರಿ ಎಂಬ ಭಾವನೆ ಬಂದಿರಬಹುದು. "ಮೇಲ್ನೋಟಕ್ಕೆ ನೀವು ಮಾಡಿರುವುದು ಸರಿ ಎಂದು ಅನಿಸಿದರೂ, ನಿಮ್ಮ ಅಂತರ್ಯಕ್ಕೆ ನಿಮ್ಮ ತಪ್ಪಿನ ಅರಿವಿರುತ್ತದೆ" ಎಂದು ಸ್ವಲ್ಪ ಹೊತ್ತಿನ ನಂತರ ಹೇಳಿದೆ.

ಅವರು ಹೇಳಿದುದರ ಬಗ್ಗೆ ಕೆಲವು ಸಮಯದ ನಂತರ ವಿಚಾರ ಮಾಡಿದೆ. ನಾವು ಸ್ವಲ್ಪ ಹಣವನ್ನು ಕಳೆದುಕೊಳ್ಳುತ್ತೇವೆ, ಸ್ವಲ್ಪ ಹಣವನ್ನು ಗಳಿಸಿಕೊಳ್ಳುತ್ತೇವೆ. ಕೆಲವರು ನಮಗೆ ನೋವನ್ನುಂಟು ಮಾಡುತ್ತಾರೆ ಮತ್ತು ನಾವು ಅವರಿಗೆ ನೋವುಂಟುಮಾಡುತ್ತೇವೆ. ತಾರ್ಕಿಕವಾಗಿ ಮತ್ತು ಲೆಕ್ಕಾಚಾರದ ನೆಲೆಯಲ್ಲಿ ನೋಡಿದರೆ ನಾವು ಸರಿ ಇರಬಹುದು. ಆದರೆ ಆ ಮಟ್ಟದಲ್ಲಿ ಪರಿಸ್ಥಿತಿಗಳನ್ನು ನಿಭಾಯಿಸಲು ನಾವು ಯಂತ್ರ ಅಥವಾ ಯಂತ್ರಮಾನವರಲ್ಲ. ಮಾನವರು ಮೂಲತಃ ದೈವಿಕ ಗುಣವುಳ್ಳವರು. ನಾವು ನೀತಿ ಮತ್ತು ಮೌಲ್ಯಾಧಾರಿತ ಜೀವನ ನಡೆಸುತ್ತೇವೆ. ಅಧ್ಯಾತ್ಮಿಕ ಮಟ್ಟದಲ್ಲಿ ಸತ್ಯಕ್ಕೆ ಯಾವಾಗಲೂ ಶೃತಿಗೊಂಡಿದ್ದು ಎಲ್ಲಾ ಪರಿಸ್ಥಿತಿಗಳನ್ನು ಹಾಗೂ ಜನರನ್ನು ಪ್ರೀತಿ, ದಯೆ ಮತ್ತು ಪ್ರಾಮಾಣಿಕತೆಯಿಂದ ನಿಭಾಯಿಸಲು ಪ್ರಯತ್ನಿಸಬೇಕು. ಇದರಿಂದ ವಿಮುಖನಾಗುವುದರಿಂದ ತತ್ಪರಿಣಾಮಗಳನ್ನು ಆಕರ್ಷಿಸುತ್ತೇವೆ.

ನಮ್ಮ ಜೀವನದಲ್ಲಿ ಲೈಟ್ ಚಾನಲಿಂಗ್‌ನ ಪಾತ್ರದ ಬಗ್ಗೆ ಪರ್ಯಾಲೋಚಿಸುತ್ತೇನೆ.

ಲೈಟ್ ಚಾನಲಿಂಗ್ ವಿಶ್ವ ಸಂಚಲನವನ್ನು ಗುರೂಜಿ ಕೃಷ್ಣಾನಂದರು 2008ರಲ್ಲಿ ಪ್ರಾರಂಭಿಸಿದಾಗ, ಈ ಭೂಮಿಯ ಮೇಲೆ ಪ್ರೀತಿ, ಶಾಂತಿ ಮತ್ತು ಪವಿತ್ರತೆಯಿಂದೊಡಗೂಡಿದ ನವಯುಗದ ಸ್ಥಾಪನೆಯ ಉನ್ನತ ದೃಷ್ಟಿಯನ್ನು ಹೊಂದಿದ್ದರು. ಈ ಪ್ರಪಂಚಕ್ಕೆ ಬಹಳ ಸರಳವಾದ ಮತ್ತು ಅತ್ಯಂತ ಪ್ರಭಾವೀಯುತವಾದ ಲೈಟ್ ಚಾನಲಿಂಗ್ ತಂತ್ರವನ್ನು ಪರಿಚಯಿಸಿದರು. ಓದುಗರು ಈಗಾಗಲೇ ತಿಳಿದಿರುವಂತೆ ಈ ತಂತ್ರವು ನಮ್ಮನ್ನು ಅಪರಿಮಿತವಾದ ಬೆಳಕಿನ ಸಾಗರದಲ್ಲಿನ ಚೈತನ್ಯದ ಜೊತೆ ಸೇರುವಂತೆ ಮಾಡುತ್ತದೆ. ಇದರಿಂದ ನಾವು ಶಕ್ತಿಯನ್ನು ಪಡೆದುಕೊಂಡು ಉತ್ತಮವಾಗಿ ಹಾಗೂ ಸಕಾರಾತ್ಮಕವಾಗಿ ಇರಬಹುದು. ನಾವು ಯಾವಾಗ ಬೆಳಕನ್ನು ನಮ್ಮ ಮೂಲಕ ಹರಿಯಲು ಅನುವು ಮಾಡಿಕೊಡುತ್ತೇವೆಯೋ ಆಗ, ಬೆಳಕಿನ ಎಲ್ಲಾ ಅತ್ಯುನ್ನತ ಗುಣಗಳೊಂದಿಗೆ ನಾವು ಸಮ್ಮಿಳಿತಗೊಳ್ಳುತ್ತೇವೆ. ನಮಗೆ ತಿಳಿದಿರುವಂತೆ ಬೆಳಕು ಎಂದರೆ ಪ್ರೀತಿ, ಶಾಂತಿ ಮತ್ತು ಶಕ್ತಿ. ಬೆಳಕು ನಮಗೆ ಜ್ಞಾನವನ್ನು ಕೊಡುತ್ತದೆ. ಇದು ನಮಗೆ ಸನ್ಮಾರ್ಗದಲ್ಲಿ ಮುನ್ನಡೆಯಲು ಧೈರ್ಯ ನೀಡುತ್ತದೆ ಮತ್ತು ಮಾರ್ಗದರ್ಶಿಸುತ್ತದೆ. ನಮ್ಮ ನೋವು ಮತ್ತು ಗಾಯಗಳನ್ನು ಉಪಶಮನಗೊಳಿಸುವುದರ ಜೊತೆಗೆ ಬೆಳಕು ನಮಗೆ ಸಾಂತ್ವನವನ್ನು ನೀಡುತ್ತದೆ.

ಅವರಿಗೆ ಇದನ್ನೆಲ್ಲಾ ವಿವರಿಸಲು ನನ್ನಿಂದ ಸಾಧ್ಯವಾಗಲಿಲ್ಲ. ಸರಿಯಾದ ನಿರ್ಧಾರವನ್ನು ತೆಗೆದುಕೊಳ್ಳಲು ಮತ್ತು ಕಾರ್ಯಗತಗೊಳಿಸಲು ಕೆಲವು ಸಲ ನಮ್ಮಲ್ಲಿ ಅಂತಃಶಕ್ತಿಯ ಕೊರತೆಯಿರುತ್ತದೆ ಎಂದು ಮಾತ್ರ ನಾನು ಹೇಳಿದೆ. ಅವರು ಸುಮ್ಮನಾದರು. ಸ್ವಲ್ಪ ಸಮಯದ ನಂತರ ನಮ್ಮ ಮಾತು ವಿಷಯಾಂತರಗೊಂಡಿತು. ಬೆಳಕು ಸದ್ದಿಲ್ಲದೆ ನನ್ನ ಮೂಲಕ ಅವರಿಗೆ ಪ್ರವಹಿಸುತ್ತಿರುವುದು ನನಗೆ ಗೊತ್ತಿತ್ತು. ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲು, ಅವರಿಗುಂಟಾದ ನೋವುಗಳಿಂದ ಉಪಶಮನ ಪಡೆಯಲು ಮತ್ತು ಪ್ರತಿಕ್ಷಣದಲ್ಲೂ ತನ್ನ ನಿಜವಾದ ದೈವಿಕಗುಣವನ್ನು ಅಭಿವ್ಯಕ್ತಿಸಲು ಅವರು ಲೈಟ್ ಚಾನಲ್ ಮಾಡುವಂತಾಗಲಿ ಮತ್ತು ಯಾವಾಗಲೂ ಬೆಳಕಿನೊಂದಿಗೆ ಸಂಪರ್ಕವಿರಿಸಿಕೊಂಡಿರಲಿ ಎಂದು ಹಾರೈಸುತ್ತೇನೆ. ■

## ಲೈಟ್ ಚಾನಲಿಂಗ್ ಕೇಂದ್ರಗಳು

**ಮೈಸೂರು**

ಬುಧವಾರ (ಸಂಜೆ 6)
ಇನ್ಫೋಸಿಸ್ ಲಿ, ಹೆಬ್ಬಾಳ್ ಎಲೆಕ್ಟ್ರಾನಿಕ್ಸ್ ಸಿಟಿ,
ಹೂಟಗಳ್ಳಿ, ಮೈಸೂರು-570018
☎ 9980837179, ಶ್ರೀ ಆನಂದ್ ನಿರಂಜನ್
☎ 8095026224, ಶ್ರೀ ಆಕಾಶ್ ಮಲ್ಲಿಕ್

**ಸೋಲಾಪೂರ್**

ಪ್ರತಿದಿನ (ಸಂಜೆ 7:00 - 7:30)
ಬಾಲಗಣೇಶ್ ಮಂದಿರ, ಬುಶರ್ ಪೇಠ್,
ಮೊಹೋಲ್
☎ 09860967066 ಶ್ರೀ ವಿವೇಕಾನಂದ ಸ್ವಾಮಿ
☎ 09970800279 ಶ್ರೀಮತಿ ಸ್ವರೂಪ ಸ್ವಾಮಿ

**ಚೆನ್ನೈ**

ಭಾನುವಾರ (ಬೆಳಿಗ್ಗೆ 10:00 -10:30) ನಂ. 481, ಸಾಯಿಪ್ರೇಮ್, 19 ನೇ ರಸ್ತೆ,
4ನೇ ಸೆಕ್ಟರ್, ಕೆ. ಕೆ. ನಗರ
☎ 9444880409 ಶ್ರೀಮತಿ ರಾಜಲಕ್ಷ್ಮಿ ಆರ್.

**ತಿರುನಲ್ವೇಲಿ**

ಪ್ರತಿ ದಿನ (ಸಂಜೆ 7:00 - 7:30)
ವಡಕ್ಕು ತೆರು, ಚೆಲ್ಲಾ ಪಿಳ್ಳೈಯಾರ್ ಕುಲಮ್
ಎ.ಪಿ. ನಾದನೂರ್ ಪೋಸ್ಟ್
ಆಲಂಗುಲಮ್ ತಾಲ್ಲೂಕು - 627423
☎ 9444458747 ಶ್ರೀ ಮಾರಿಯಪ್ಪನ್ ಎನ್.

**ಪುಣೆ**

ಶನಿವಾರ (ಸಂಜೆ 6.30 - 7.00)
3 B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ, ಪುಣೆ - 411016
☎ 9011038169 ಶ್ರೀ ಆಶುತೋಶ್ ನವನ್‌ಗುಲ್


ಗುರುವಾರ (ಮಧ್ಯಾಹ್ನ 2:30 - 3:00)
ಸಿಂಧಿ ಮಂದಿರ, ಸತ್ನಮ್ ಟೆಕ್ಸ್‌ಟೈಲ್ ಪಕ್ಕ,
ಶಿವಸೇನ ಕಛೇರಿಯ ಸಮೀಪ, ಉರುಲಿ ಕಾಂಚನ್,
ಹವೇಲಿ ಜಿಲ್ಲೆ, ಪುಣೆ - 412202
☎ 9822973632, ಶ್ರೀ ಗೋರಕ್ಷ್ ಮಹಾದಿಕ್

**ವಿಶಾಖಪಟ್ಟಣ**

ಶನಿವಾರ (ಸಂಜೆ 7:00 - 7:30)
ಮನೆ ನಂ. 14-339/19, ಫ್ಲಾಟ್ ನಂ. 207,
ಶ್ರೀ ಮಿತ್ರ ಹೈಟ್ಸ್, ಬಾಲಾಜಿ ಗಾರ್ಡನ್,
ಗೋಪಾಲಪಟ್ನಂ, APRTC ಬಸ್ ಡಿಪೋ ಎದುರು
☎ 9848628324, ಶ್ರೀ ವಿ. ಹರಿಕೃಷ್ಣನ್

**ಮೀರಜ್**

ಗುರುವಾರ (ಸಂಜೆ 7:45)
ಶ್ರೀ ಶಿವರುದ್ರ ಬಿ. ಬೆಲಗನ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
A-gat Plot No-135, ಸುಭಾಶ್ ನಗರ ಪೋಸ್ಟ್
☎ 9822421463 ಶ್ರೀ ಮಹಾಜನ್



## ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ನನ್ನ ಜೀವನದಲ್ಲಿ ಮೊಟ್ಟ ಮೊದಲಿಗೆ ಲೈಟ್ ಚಾನಲ್ ಮಾಡುತ್ತಿದ್ದೇನೆ. ಬೆಳಿಗ್ಗೆಯಿಂದ ಕೆಟ್ಟ ಆಲೋಚನೆಗಳು ಬರುತ್ತಿದ್ದವು. ಇದರಿಂದ ನಾನು ಬೇಸರಗೊಂಡಿದ್ದೆ. ಆದರೆ ಲೈಟ್ ಚಾನಲ್ ಮಾಡುತ್ತಿದ್ದಂತೆ, ಆ ಎಲ್ಲಾ ಆಲೋಚನೆಗಳು ದೂರವಾದವು. ಈಗ ನಾನು ಸಂತೋಷದಿಂದ ಮತ್ತು ಸಮಾಧಾನದಿಂದ ಇದ್ದೇನೆ. ಇಂಥ ಅದ್ಬುತವಾದ ತಂತ್ರವನ್ನು ಕಲಿಸಿಕೊಟ್ಟದ್ದಕ್ಕಾಗಿ ನಿಮಗೆ ನನ್ನ ಕೃತಜ್ಞತೆಗಳು.

– ಅಶ್ವಿನಿ, ಟಾರ್ಚ್ ಕಮ್ಯುನಿಟಿ ಕಾಲೇಜ್, ಫ್ರೇಜ್ಹರ್ ಟೌನ್, ಬೆಂಗಳೂರು

ಕಳೆದ ಎರಡು ದಿನಗಳಿಂದ ಬೆಳಕಿನ ಜೊತೆ ಜೀವಿಸುತ್ತಿದ್ದೇನೆ. ಜನರೊಂದಿಗೆ ಸಂಪರ್ಕ ಹೊಂದಲು, ಅವರೊಂದಿಗೆ ಮಾತನಾಡುವುದೇ ಸುಲಭ ಮಾರ್ಗವೆಂದು ನಾನು ಭಾವಿಸಿದ್ದೆ. ಲೈಟ್ ಚಾನಲಿಂಗ್ ಅಭ್ಯಾಸದ ನಂತರವಷ್ಟೇ ನನಗೆ ಅರಿವಾಯಿತು, ಈ ಹಿಂದೆ ನಾನು ಯಾರೊಂದಿಗೂ ಸಂಪರ್ಕ ಹೊಂದಿರಲಿಲ್ಲ ವೆಂದು. ಹಾಗೆಯೇ ನನ್ನ ಸ್ನೇಹಿತರೊಂದಿಗೆ ಇದ್ದ ಸಂಬಂಧ ಯಾವಾಗಲೂ ಅಪೂರ್ಣ ವೆನಿಸಿದ್ದವು. ಈಗ ಎಲ್ಲರನ್ನೂ ಆತ್ಮಸ್ವ ರೂಪಿಗಳಾಗಿ ನೋಡುತ್ತೇನೆ ಹಾಗೂ ಆ ಮಟ್ಟದಲ್ಲೇ ಅವರನ್ನು ಸಂಪರ್ಕಿಸುತ್ತೇನೆ.

ಆತ್ಮಗಳೊಂದಿಗೆ ಸಂಪರ್ಕಹೊಂದಲು ಕೇವಲ ಪ್ರೀತಿ ಮತ್ತು ಬೆಳಕುಗಳೇ ದಾರಿ. ಪ್ರೀತಿ ಮತ್ತು ಬೆಳಕು ನಮ್ಮಲ್ಲೇ ಇವೆ. ನಮಗೆ ಸಹಾಯ ಮಾಡಲು, ನಮ್ಮ ಕರೆಗಾಗಿ ಕಾಯುತ್ತಾ ಕುಳಿತಿವೆ.

– ನಯನ ಶ್ರೀ ಬಿ. 10ನೇ ತರಗತಿ, ಎಸ್ ಬಿ ಎಸ್ ಮೂತ ಗರ್ಲ್ಸ್ ಸೀನಿಯರ್ ಸೆಕೆಂಡರಿ ಸ್ಕೂಲ್, ಚೆನ್ನೈ

ನಾವು ನಡೆಸುತ್ತಿರುವ ಜ್ಯೋತಿ ಪ್ರಾಜೆಕ್ಟ್‌ನ 4ನೇ ತರಗತಿಯಲ್ಲಿ ಓದುತ್ತಿರುವ ಒಬ್ಬ ವಿದ್ಯಾರ್ಥಿನಿಗೆ ಸ್ಪಷ್ಟವಾಗಿ ಮಾತನಾಡಲಾಗು ತ್ತಿರಲಿಲ್ಲ ಮತ್ತು ಆ ಹುಡುಗಿಗೆ ಬರೆಯುವಾಗ ಏಕಾಗ್ರತೆ ಇರುತ್ತಿರಲಿಲ್ಲ. ಮನೆ ಮತ್ತು ಶಾಲೆ ಯಲ್ಲಿ ಮಾಡುವ ಲೈಟ್ ಚಾನಲಿಂಗ್ ಅಭ್ಯಾಸ ದಿಂದಾಗಿ ಆ ವಿದ್ಯಾರ್ಥಿನಿಯ ಬರವಣಿಗೆಯಲ್ಲಿ ಮತ್ತು ವಿದ್ಯಾಭ್ಯಾಸದಲ್ಲಿ ಗಣನೀಯ ಪ್ರಗತಿ ಕಂಡಿದೆ. ಈಗ ಅವಳು ಚುರುಕಾಗಿದ್ದಾಳೆ. ಸ್ವತಃ ಅವಳೇ ಹೋಂವರ್ಕ್ ಕೊಡಿ ಎಂದು ಕೇಳುತ್ತಾಳೆ. ಲೈಟ್ ಚಾನಲಿಂಗ್‌ಮಾಡಿದ ನಂತರ ಓದಲು ಸಂತೋಷವಾಗುತ್ತದೆ ಎಂದು ಅವಳು ಹೇಳು ತ್ತಾಳೆ.

1ನೇ ತರಗತಿ ವಿದ್ಯಾರ್ಥಿನಿಯೊಬ್ಬಳು ಸರಿ ಯಾಗಿ ಮಾತನಾಡುತ್ತಿರಲಿಲ್ಲ. ಯಾರಾದರೂ ಅವಳನ್ನು ಕರೆದರೆ ಭಯದಿಂದ ನಡುಗುತ್ತಿದ್ದಳು. ಲೈಟ್ ಚಾನಲಿಂಗ್ ಅಭ್ಯಾಸದಿಂದ ಸುಧಾರಣೆ ಹೊಂದಿದ್ದಾಳೆ. ತನ್ನ ಓದಿನ ಬಗ್ಗೆ ಎಲ್ಲರಂತೆ ಬದಲಾವಣೆ ಕಂಡಿದ್ದಾಳೆ. ತರಗತಿಗೆ ತಡವಾಗಿ ಬರುತ್ತಿದ್ದ ಅವಳು ಈಗ ಸರಿಯಾದ ಸಮಯಕ್ಕೆ ಬರುತ್ತಿದ್ದಾಳೆ ಮತ್ತು ಎಲ್ಲರಂತೆ ಮಾತನಾ ಡುತ್ತಾಳೆ. ಲೈಟ್ ಚಾನಲಿಂಗ್ ಈ ಎಲ್ಲಾ ಬದಲಾವಣೆಗಳಿಗೆ ಕಾರಣವಾಗಿದೆ.

– ಶ್ರೀಮತಿ ಹಂಸವತಿ, ಶಿಕ್ಷಕಿ, ಜ್ಯೋತಿ ಪ್ರಾಜೆಕ್ಟ್, ಮಾನಸ ಫೌಂಡೇಶನ್, ಬೆಂಗಳೂರು

ನಮ್ಮ ಕುಟುಂಬದಲ್ಲಿ ನನ್ನಿಂದ ಪ್ರಾರಂಭವಾದ ಜಗಳದಿಂದ ನಾನು ಬಹಳ ನೊಂದಿದ್ದೆ. ಒಂದು ವೇಳೆ ನಾನು ಮಾತನಾಡದೆ ಮೌನದಿಂದಿದ್ದರೆ ಅದಾವುದೂ ಆಗುತ್ತಿರಲಿಲ್ಲ. ಅಂದೇ ರಾತ್ರಿ ನನಗೆ ಮತ್ತು ನಮ್ಮ ಕುಟುಂಬದ ಸದಸ್ಯರಿಗೆ ಬೆಳಕನ್ನು ಕಳುಹಿಸಿದೆ. ಇದರಿಂದ ನಾನು ಶಾಂತತೆ ಕಂಡುಕೊಂಡೆ. ಮರುದಿನ ಬೆಳಿಗ್ಗೆ ಪ್ರತಿಯೊಬ್ಬರೂ ಸರಿಯಾಗಿದ್ದರು. ಪ್ರತಿಯೊಂದೂ ಸಹಜತೆಗೆ ಮರಳಿತ್ತು.

ನನ್ನ ಹೃದಯದಲ್ಲಿ ಅಪರಾಧಿಭಾವವಿದ್ದ ಕಾರಣ ಧೈರ್ಯ ತಂದುಕೊಂಡು ಕ್ಷಮೆ ಯಾಚಿಸಲು ಹೋದೆ. ಕೊನೆಗೆ ಇದಕ್ಕೆಲ್ಲಾ ನಾನು ಕಾರಣಳಲ್ಲವೆಂದು ತಿಳಿದಾಗ ನನ್ನ ಸಂತೋಷಕ್ಕೆ ಮಿತಿಯೇ ಇರಲಿಲ್ಲ. ಬೆಳಕೇ ನಿನಗೆ ನನ್ನ ಕೃತಜ್ಞತೆಗಳು!

– ಪವಿತ್ರ ಜಿ, 10ನೇ ತರಗತಿ, ಎಸ್ ಬಿ ಎಸ್ ಮೂತ ಗರ್ಲ್ಸ್ ಸೀನಿಯರ್ ಸೆಕೆಂಡರಿ ಸ್ಕೂಲ್, ಚೆನ್ನೈ

ವಿದ್ಯಾರಣ್ಯಪುರದ ತಿಂಡ್ಲುನಲ್ಲಿರುವ ಒಂದು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಲೈಟ್ ಚಾನಲಿಂಗ್ ಮಾಡುತ್ತಿದ್ದಾಗ, ಒಬ್ಬ ವಿದ್ಯಾರ್ಥಿನಿ, ಸಮಾಧಿ ಸ್ಥಿತಿಯಲ್ಲಿ ಧ್ಯಾನ ಮಾಡುತ್ತಿರುವ ಒಬ್ಬ ಋಷಿಯಂತೆ ನೇರವಾಗಿ ಕುಳಿತು ಸಂಪೂರ್ಣವಾಗಿ ಮಗ್ನಳಾಗಿರುವುದನ್ನು ಗಮನಿಸಿದೆ. ಅವಳ ಶರೀರದಿಂದ ಹಳದಿ ಮಿಶ್ರಿತ ನಸುಗೆಂಪಿನ ಬಣ್ಣದ ಬೆಳಕು ಹೊರ ಹೊಮ್ಮುತ್ತಿತ್ತು. ತೆಳು ಹಳದಿ ಬಣ್ಣದಿಂದ ಕಂಗೊಳಿಸುತ್ತಾ, ಚಂದ್ರನೇ ಅವಳ ಮೇಲೆ ಇಳಿದುಬಂದಂತೆ ಕಂಡಳು. ಸೆಷನ್ ಮುಗಿದನಂತರ, ತನಗೆ ಗಾಳಿಯಲ್ಲಿ ತೇಲಿದ ಅನುಭವವಾಯಿತು ಎಂದು ಅವಳು ನನ್ನಲ್ಲಿ ಪಿಸುಮಾತಿನಲ್ಲಿ ಹೇಳಿದಳು.

– ಮಾಲಾ ಸುರೇಶ್, ಕಾರ್ಯಕರ್ತೆ

ಬೆಳಕಿನ ಸಂಚಲನ ಕನ್ನಡ ಮಾಸಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು– 560077
ಮುದ್ರಣ ಸ್ಥಳ : ಗುಡ್ ಪ್ರಿಂಟ್ಸ್, ವೀಣ ಕಾಂಪ್ಲೆಕ್ಸ್, ಹಳೇ ಮದ್ರಾಸ್ ರಸ್ತೆ, ದೂರವಾಣಿನಗರ, ಬೆಂಗಳೂರು – 560 016
ಮಾಲೀಕರು ; ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು – 560077 ಸಂಪಾದಕರು: ಶ್ರೀದೇವಿ